ಇಂದಿನ ದಿನಮಾನದಲ್ಲಿ ಜನರನ್ನು ಸೇರಿಸುವ ಸಾಮರ್ಥ್ಯ ಯಾರಿಗಿದೆ ಎಂದು ನಾನು ಪ್ರಶ್ನಿಸಿದರೆ, ನೀವು ಕೆಲವು ಉತ್ತರಗಳನ್ನಾದರೂ ನೀಡಬಲ್ಲಿರಿ. ಅದು ಜಾತಿಸಂಘಗಳಿಗಿದೆ ಎಂದೊ, ಜಾತ್ರೆ, ಧಾರ್ಮಿಕ ಕಾರ್ಯಕ್ರಮಗಳಿಗೆ ಇದೆ ಎಂದೊ, ಸ್ವಾಮಿಗಳು, ಜ್ಯೋತಿಷಿಗಳು ನೀಡುವ ಪ್ರವಚನಗಳಿಗಿದೆ ಎಂದೊ, ನಮ್ಮ ನೆರವಿಗೆ ಬಾರದ ರಾಜಕಾರಣಿಗಳಿಗೆ ಇದೆ ಎಂದೊ ಉತ್ತರ ನೀಡಬಹುದು. ಕೋಳಿಗೂ ಹೀಗೆ ಜನರನ್ನು ಸೇರಿಸುವ ತಾಕತ್ತು ಇದೆಯೆಂದು ನಾನು ಹೇಳಿದರೆ ನಿಮ್ಮ ಹುಬ್ಬು ಮೇಲೇರಬಹುದು. ಹೌದು, ಕೋಳಿಗೆ ಈ ಬಲವಿದೆ. ನೀವು ಯಾರಾದರೂ ಕುಂದಾಪುರ ಸಂತೆ ಮಾರುಕಟ್ಟೆಯ ಬಳಿ ಶನಿವಾರ ಬಂದರೆ ನನ್ನ ಮಾತಿನ ತಥ್ಯ ಅರ್ಥವಾದೀತು. ಕುಂದಾಪುರ ಮಾತ್ರವಲ್ಲ ಕೋಳಿಗಳನ್ನು ಮಾರುವ ಎಲ್ಲ ಜಾಗಗಳಿಗೆ ಈ ಗುರುತ್ವಾಕರ್ಷಣೆಯ ಶಕ್ತಿ ಇದೆ. ಮೀನಿನ ಮಾರುಕಟ್ಟೆಯ ಸುತ್ತ ಸೇರುವ ಬೆಕ್ಕುಗಳ ಹಾಗೆ ಸಂತೆಯ ರಸ್ತೆಯ ಮಗ್ಗಲಿನಲಿ ಜನರ ಪರಿಷೆ. ಇಷ್ಟು ಜನ ಸೇರೋದು ತರಕಾರಿ ಹಣ್ಣು ಇತ್ಯಾದಿ ಸಾಮಗ್ರಿಕೊಳ್ಳಲು ಅಲ್ಲ. ಕೋಳಿಯನ್ನು ಖರೀದಿಸಲು ಬರುತ್ತಾರೆ. ದೂರದ ತಮಿಳುನಾಡಿನಿಂದ ಊರ್ಕೋಳಿ(ನಾಟಿಕೋಳಿ)ಗಳನ್ನು ಮಿನಿಲಾರಿಗಳಲ್ಲಿ ತಂದು ಮಾರಾಟ ಮಾಡುತ್ತಾರೆ. ಇಷ್ಟೆಲ್ಲ ಪ್ರಭಾವಿಯಾದ ಕೋಳಿಯ ಬಗೆಗಿನ ನಮ್ಮ ತಿಳಿವಳಿಕೆ ಅಲ್ಪವಾದುದು. ನಮ್ಮ ನಾಗರಿಕತೆಯ ಬೆಳವಣಿಗೆಯ ಜೊತೆಯಲ್ಲೆ ಹೆಜ್ಜೆಹಾಕುತ್ತ ಬಂದ ಕೋಳಿಯ ಕುರಿತು ನಮ್ಮ ಯಾವ ಇತಿಹಾಸಕಾರರೂ ಗಮನಹರಿಸಲಿಲ್ಲ. ಜೀವಿಗಳ ಉಗಮ ವಿಕಾಸದ ಅಧ್ಯಯನ ನಿರತ ಜೀವವಿಜ್ಞಾನಿಗಳು ಕೋಳಿಯನ್ನು ತಮ್ಮ ಸಂಶೋಧನೆಯ ಭಾಗವಾಗಿಸಿಕೊಂಡಿಲ್ಲ. ಹಾಗಾಗಿ ನಾವು ಅದನೊಂದು ಕ್ಷುದ್ರಜೀವಿಯಂತೆ ಕಂಡು ಅಲಕ್ಷಿಸಿದ್ದೇವೆ. ಅದರ ನೈಜ ಬಹುರೂಪಿ ಶಕ್ತಿಯನ್ನರಿತು, ನಾಡಪ್ರೇಮ, ಭಾಷಾಪ್ರೇಮದ ಹಾಗೆ ಕುಕ್ಕುಟಪ್ರೇಮವನ್ನು ಬೆಳಸಿಕೊಂಡು ಗೌರವಿಸುವ ಮೂಲಕ ಈವರೆಗಿನ ನಿರ್ಲಕ್ಷಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಿದೆ. ನಮ್ಮ ನಾಲಿಗೆಯ ರುಚಿ ತಣಿಸಿ, ದೇಹಕ್ಕೆ ಶಕ್ತಿತುಂಬಿ ನಮಗಾಗಿ ಜೀವಾರ್ಪಣೆ ಮಾಡಿಕೊಳ್ಳುವ ಈ ಜೀವಿಯನ್ನು ನಿರ್ಲಕ್ಷಿಸುವುದು ಸರಿಯಲ್ಲ ಎಂಬುದು ನನ್ನ ಭಾವನೆ.

ಮಾಂಸಹಾರಿಗಳ ನಾಲಗೆಯಲ್ಲಿ ನೀರೂರಿಸುವ ಖಾದ್ಯಗಳಲ್ಲಿ ಕೋಳಿಗೆ ಅಗ್ರ ಸ್ಥಾನವಿದೆ. ವಾರದ ಕೊನೆಗೆ ಇದಕ್ಕೆ ಎಲ್ಲಿಲ್ಲದ ಬೇಡಿಕೆ. ಇದು ನಿಮಗೂ ತಿಳಿದ, ಅನುಭವಕ್ಕೆ ಬಂದ ಸಂಗತಿಯೆ. ಕೋಳಿ ಒಂದು ಆಹಾರವಾಗಿ ನಿಮಗೆ ಪರಿಚಿತ. ಬೇರೆ ಯಾವ ಆಹಾರಗಳಿಗೂ ಇಲ್ಲದಿರುವ ವೈವಿಧ್ಯ ಕೋಳಿಗಿದೆ. ಕೋಳಿ ಮಾಂಸವನ್ನಾಧರಿಸಿ ರೂಪುಗೊಂಡ ಖಾದ್ಯಗಳನ್ನು ನೆನಪು ಮಾಡಿಕೊಳ್ಳಿ ಅದರ ವೈವಿಧ್ಯ ನಿಮ್ಮ ಕಣ್ಣೆದುರು ನಿಲ್ಲುತ್ತದೆ. ಚಿಕನ್ ಕಬಾಬ್, ಬಿರಿಯಾನಿ, ಕೈಮಾ, ಚಿಕನ್ ಚಿಲ್ಲಿ, ಚಿಕನ್ ಡ್ರೈ, ಪೆಪ್ಪರ್ ಡ್ರೈ, ಚಿಕನ್–65, ತಿಕ್ಕ, ತಂದೂರಿ, ಸುಕ್ಕ, ಘೀರೋಸ್ಟ್ – ಹೇಳುತ್ತ ಹೋದರೆ ಟ್ರಾಫಿಕ್‌ನಲ್ಲಿ ನಿಂತ ವಾಹನಗಳ ಹಾಗೆ ಪಟ್ಟಿ ಬೆಳೆಯುತ್ತಲೆ ಹೋಗುತ್ತದೆ. ನಿಮ್ಮ ಬಾಯಲ್ಲೂ ನೀರಿಳಿಯುತ್ತದೆ. ಕೋಳಿಯ ಆರಾಧನೆ ಇಷ್ಟಕ್ಕೇ ನಿಲ್ಲುತ್ತದೆಯೆ? ಖಂಡಿತ ಇಲ್ಲ. ನಾಲಿಗೆಗೆ ಚುರುಕು ಮೂಡಿಸುವ ಉಪ್ಪಿನಕಾಯಿಗೂ ಈಗ ಕೋಳಿಮಾಂಸವೇ ಸಾಮಾಗ್ರಿಯಾಗಿದೆ. ಆಂಧ್ರಪ್ರದೇಶದ ಗುಂಟೂರಿನ